# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ,
## ಉತ್ತರಹಳ್ಳಿ ಉಪವಿಭಾಗ, ಬೆಂಗಳೂರು

ಸಂ:ಸ.ಕಾ.ಅ(ಉ)/ಪಿಆರ್/ /2020-21

ದಿನಾಂಕ:17-10-2020

## ದಿನಾಂಕ:17-10-2020ರಂದು ನಡೆದ 184-ಉತ್ತರಹಳ್ಳಿ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು

ಮಾನ್ಯ ಆಯುಕ್ತರವರ ಆದೇಶದ ದಿನಾಂಕ:21-9-2020ರ ಮೇರೆಗೆ ವಾರ್ಡ್ ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ:17-10-2020 ಶನಿವಾರ ಮಧ್ಯಾಹ್ನ 3.00 ಗಂಟೆಗೆ ವಾರ್ಡ್ ನಂ.184 ಉತ್ತರಹಳ್ಳಿ ವಾರ್ಡ್ ಮಟ್ಟದ ಸಮಿತಿ ಸಭೆಯನ್ನು ನೊಡೆಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷರಾದ ನೋಡೆಲ್ ಅಧಿಕಾರಿರವರು ಸಭೆಯನ್ನು ಪ್ರಾರಂಭಿಸಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸದಸ್ಯರಿಗೂ ಸ್ವಾಗತ ಕೋರಿದರು.

ಮುಂದುವರೆದಂತೆ ಸಭೆಗೆ ಉದ್ದೇಶಿಸಲಾಗಿರುವ ಪ್ರಮುಖ ವಿಷಯಗಳನ್ನು ಚರ್ಚಿಸಲಾಯಿತು. ಸಾರ್ವಜನಿಕರ ದೂರುಗಳು ಹಾಗೂ ನೀಡಬೇಕಾಗಿರುವ ಮೂಲಭೂತ ವ್ಯವಸ್ಥೆಗಳ ಕುರಿತು ಹಾಗೂ ವಾರ್ಡ್ ಅಭಿವೃದ್ಧಿಗೆ ಸಂಬಂಧಿಸಿದಂತೆ ಚರ್ಚಿಸಲಾಗಿದ್ದು, ಕೋವಿಡ್-19 ವೈರಸ್ ಸೋಂಕಿನ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಬಗ್ಗೆ ಸುಧೀರ್ಘವಾಗಿ ಚರ್ಚಿಸಲಾಯಿತು.

## ಸಭೆಗೆ ಹಾಜರಿದ್ದವರು:

| ಕ್ರಸಂ | ಸದಸ್ಯರ ಹೆಸರು | ಪದನಾಮ/ಇಲಾಖೆ | ಹಾಜರಾತಿ |
|---|---|---|---|
| 1 | ಶ್ರೀಮತಿ ಚೈತ್ರಾ ಹೊನ್ನಾಪುರ | ಅಧ್ಯಕ್ಷರು, ವಾರ್ಡ್ ನೋಡೆಲ್ ಅಧಿಕಾರಿ | ಹಾಜರಿದ್ದರು |
| 2 | ಶ್ರೀ ಎಂ.ಜಿ.ಕುಮಾರ್ | ಕಾರ್ಯದರ್ಶಿಗಳು | ಹಾಜರಿದ್ದರು |
| 3 | ಶ್ರೀ ಹೆಚ್.ದೇವರಾಜ್ | ಸಹ ಕಂದಾಯ ಅಧಿಕಾರಿ | ಹಾಜರಿದ್ದರು |
| 4 | ಶ್ರೀ ಶಶಿಕುಮಾರ್ | ಹಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಿದ್ದರು |
| 5 | ಶ್ರೀ ರಿಶೀಕ್ ರಾಕೇಶ್ | ಅಭಿಜ್ಞಾನ ಪೌಂಡೇಶನ್ ಸ್ಥಳೀಯ ಸಂಘ | ಹಾಜರಿದ್ದರು |
| 6 | ಶ್ರೀಮತಿ ಪ್ರಮೀಳಮ್ಮ | ಹಿರಿಯ ಆರೋಗ್ಯ ಮಹಿಳಾ ಸಹಾಯಕರು | ಹಾಜರಿದ್ದರು |
| 7 | ಶ್ರೀ ಎನ್.ಕೃಷ್ಣಮೂರ್ತಿ | ಮೌಲ್ಯಮಾಪಕರು | ಹಾಜರಿದ್ದರು |
| 8 | ಶ್ರೀ ಮಹೇಶ್ | ಪೋಲೀಸ್ ಪೇದೆ | ಹಾಜರಿದ್ದರು |
| 9 | ಶ್ರೀ ಹೆಚ್.ಸಿ.ಜಗದೀಶ್ | ಎ.ಇಇ ಬೆಸ್ಕಾಂ | ಹಾಜರಿದ್ದರು |
| 10 | ಶ್ರೀ ಅನಿಲ್ ಕುಮಾರ್ | ಎ.ಇಇ ಬೆಸ್ಕಾಂ | ಹಾಜರಿದ್ದರು |
| 11 | ಶ್ರೀ ರವೀಂದ್ರ.ಸಿ | ಆರೋಗ್ಯ ಇಲಾಖೆ | ಹಾಜರಿದ್ದರು |
| 12 | ಶ್ರೀ ವೆಂಕಟೇಶ್.ಕೆ | ಆರೋಗ್ಯ ಇಲಾಖೆ | ಹಾಜರಿದ್ದರು |
| 13 | ಶ್ರೀ ಬಿ.ಎಸ್.ನಟರಾಜ್ | ಎ.ಜಿ.ಎಸ್ ಲೇಔಟ್ ಕಾರ್ಯದರ್ಶಿ | ಹಾಜರಿದ್ದರು |
| 14 | ಶ್ರೀ ಎಸ್.ರಾಘವೇಂದ್ರ | ಎ.ಜಿ.ಎಸ್ ಲೇಔಟ್ ಅಧ್ಯಕ್ಷರು | ಹಾಜರಿದ್ದರು |

Chaitra

Scanned with CamScanner

**ಸಭೆಯ ನಡುವಳಿಗಳು:**

**ಕೋವಿಡ್–19 ಸಾಂಕ್ರಾಮಿಕ ರೋಗದ ಬಗ್ಗೆ:–**

ಸಭೆಯಲ್ಲಿ ಉದ್ದೇಶಿಸಿ, ನೋಡೆಲ್ ಅಧಿಕಾರಿಯವರು ಕೋವಿಡ್–19 ಸಾಂಕ್ರಾಮಿಕ ರೋಗ ನಗರದಲ್ಲಿ ಹೆಚ್ಚು ಪ್ರಕರಣಗಳು ಬರುತ್ತಿರುವ ಹಿನ್ನೆಲೆಯಲ್ಲಿ ಸಭೆಯಲ್ಲಿ ಉಪಸ್ಥಿತರಿದ್ದ ಆರೋಗ್ಯ ಅಧಿಕಾರಿಗಳು ಹಾಗೂ ವೈದ್ಯರನ್ನು ಉದ್ದೇಶಿಸಿ, ಕೋವಿಡ್–19 ಟೆಸ್ಟಿಂಗ್ ವಿಷಯವಾಗಿ ಟೆಸ್ಟಿಂಗ್ ಸಂಖ್ಯೆಯನ್ನು ಹೆಚ್ಚಿನ ಸಂಖ್ಯೆಯಲ್ಲಿ ಮಾಡುವ ಬಗ್ಗೆ ಯಾವ ಕ್ರಮ ಅನುಸರಿಸುತ್ತೀರಿ ಎಂಬುದಾಗಿ ಚರ್ಚಿಸಲಾಯಿತು. ಹಾಗೂ ಆರೋಗ್ಯಾಧಿಕಾರಿಗಳು ಸಂಬಂಧಪಟ್ಟ ಕಂದಾಯ ಅಧಿಕಾರಿಗಳೊಡನೆ ಸಮನ್ವಯ ಹಾಗೂ ಕೂಡಿ ಕೋವಿಡ್–19 ಟೆಸ್ಟಿಂಗ್‌ನ್ನು ಹೆಚ್ಚಿನ ಪ್ರಮಾಣದಲ್ಲಿ ಕೈಗೊಳ್ಳಲು ಚರ್ಚಿಸಲಾಯಿತು. ವಾರ್ಡ್‌ನಲ್ಲಿನ ದೊಡ್ಡ ಅಪಾರ್ಟ್‌ಮೆಂಟ್ ಹಾಗೂ ವಾಣಿಜ್ಯ ಸಂಕೀರ್ಣಗಳಲ್ಲಿ ಜನರಿಗೆ ಟೆಸ್ಟಿಂಗ್ ನಡೆಸಲು ಕ್ರಮವಹಿಸಲು ಹಾಗೂ ಜನರನ್ನು ಟೆಸ್ಟಿಂಗ್ ಮಾಡಿಸಿಕೊಳ್ಳಲು ಸಂತೈಸಿ ಕರೆತರಲು ಉಪಸ್ಥಿತರಿದ್ದ ಕಂದಾಯ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು ಹಾಗೂ ಕೋವಿಡ್–19 ಸೋಂಕಿತರಿಗೆ ಸರಿಯಾದ ಔಷಧಿಗಳು ಆರೋಗ್ಯ ಇಲಾಖೆಯಲ್ಲಿ ಸೌಲಭ್ಯ ಇರುವ ಬಗ್ಗೆ ವೈದ್ಯರಲ್ಲಿ ಚರ್ಚಿಸಲಾಯಿತು. ಮೊಬೆಲ್ ಟೆಸ್ಟಿಂಗ್ ವ್ಯವಸ್ಥೆಯನ್ನು ಉಪಯೋಗಿಸಿಕೊಳ್ಳಲು ಟೆಸ್ಟಿಂಗ್ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ಆರೋಗ್ಯಾಧಿಕಾರಿಗಳು ಹಾಗೂ ಕಂದಾಯ ಅಧಿಕಾರಿಗಳಿಗೆ ಸಮನ್ವಯ ಸಾಧಿಸಲು ನಿರ್ದೇಶಿಸಲಾಯಿತು. ಕೋವೀಡ್–19 ಟೆಸ್ಟಿಂಗ್ ವಿಚಾರವಾಗಿ ಅಂಕಿಅಂಶಗಳನ್ನು ಮುಂದಿನ ನೀಡಲು ಸಭೆಯಲ್ಲಿ ಸಂಬಂಧಪಟ್ಟ ಅಧಿಕಾರಿಗೆ ಸೂಚಿಸಲಾಯಿತು.

**ಘನತ್ಯಾಜ್ಯ ನಿರ್ವಹಣೆ ಬಗ್ಗೆ:**

- ವಾರ್ಡ್ ವ್ಯಾಪ್ತಿಯ ಆರೋಗ್ಯ ಅಧಿಕಾರಿಗಳು, ಗುತ್ತಿಗೆದಾರರು ಹಾಗೂ ಸೂಪರ್‌ವೈಸರ್ ಉಪಸ್ಥಿತರಿದ್ದು, ಘನತ್ಯಾಜ್ಯ ವಿಷಯವಾಗಿ ಬ್ಲಾಕ್ ಸ್ಪಾಟ್‌ಗಳನ್ನು ಪ್ರತಿದಿನ ಪರಿವೀಕ್ಷಿಸಿ, ಅದನ್ನು ನಿರ್ಮೂಲನೆ ಮಾಡುವಲ್ಲಿ ಕ್ರಮವಹಿಸಲು ಸೂಚಿಸಲಾಯಿತು.
- ವಾಹನಗಳನ್ನು ಒದಗಿಸಿರುವ ಗುತ್ತಿಗೆದಾರರು ಸುರಕ್ಷತಾ ಸಾಧನಗಳನ್ನು ನೀಡುವ ಬಗ್ಗೆ ವಿಚಾರಿಸಲಾಗಿದ್ದು, ಹಾಗೂ ಪ್ರತಿ ಆಟೋ, ಟಿಪ್ಪರ್ ಹಾಗೂ ಟ್ಯಾಂಕರ್ ಮತ್ತು ಕೈಗಾಡಿ ವಾಹನಗಳು ಒಳ್ಳೆಯ ಗುಣಮಟ್ಟದಲ್ಲಿರುವುದಾಗಿ ತಿಳಿಸಿರುತ್ತಾರೆ.
- ಹಸಿ ಮತ್ತು ಒಣ ತ್ಯಾಜ್ಯವನ್ನು ಪ್ರತ್ಯೇಕವಾಗಿ ಬೇರ್ಪಡಿಸುವ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವಲ್ಲಿ ಆರೋಗ್ಯಾಧಿಕಾರಿಗಳು ಆರ್.ಡಬ್ಲ್ಯೂ.ಎ ಸದಸ್ಯರೊಡನೆ ಸಮಾಲೋಚಿಸಿ, ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳುವುದಾಗಿ ಸಭೆಯಲ್ಲಿ ಸೂಚಿಸಲಾಯಿತು.
- ಘನತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಮುಂದಿನ ಸಭೆಯಲ್ಲಿ ನೀಡಲು ಸೂಚಿಸಲಾಯಿತು. ಘನ ತ್ಯಾಜ್ಯ ಬೇರ್ಪಡಿಸುವಿಕೆ ಸಂಬಂಧ 10ನೇ ಸ್ಥಾನದಲ್ಲಿ ವಾರ್ಡ್ ಇರುವುದಾಗಿ ಆರೋಗ್ಯಾಧಿಕಾರಿಗಳು ತಿಳಿಸಿರುತ್ತಾರೆ.

**ಕಾಮಗಾರಿ ಇಲಾಖೆ:**

ಸಹಾಯಕ ಅಭಿಯಂತರಾದ ಶ್ರೀ ಕುಮಾರ್ ರವರಿಗೆ ಕಾರ್ಯದರ್ಶಿಗಳಾಗಿದ್ದು, ಸಭಯಲ್ಲಿ ಉಪಸ್ಥಿರಿದ್ದು, ಎ.ಜಿ.ಎಸ್ ಸ್ಥಳೀಯ ಸಂಘ ಸಂಸ್ಥೆ, ಎ.ಜಿ.ಎಸ್ ಬಡಾವಣೆ, 3ನೇ ಮೈನ್, 7ನೇ ಕ್ರಾಸ್ POTHOLE FILLING ವಿಷಯವಾಗಿ ದೂರನ್ನು ಪ್ರಸ್ತಾಪಿಸಿದ್ದು, ಸೂಕ್ತ ಕ್ರಮ ತೆಗೆದುಕೊಳ್ಳಲು ಸಹಾಯಕ ಅಭಿಯಂತರರು ಕುಮಾರ್ ರವರಿಗೆ ಸೂಚಿಸಲಾಯಿತು.

ವಾರ್ಡ್ ಮಟ್ಟದಲ್ಲಿ ಹೊಸದಾಗಿ ಕಟ್ಟಡ ನಿರ್ಮಾಣ ಮಾಡುತ್ತಿರುವ ಕಟ್ಟಡಗಳ ಕಟ್ಟಡಗಳ ಗುಣಮಟ್ಟ(quwality checkup) ಮಾಡುವಲ್ಲಿ ಕ್ರಮವಹಿಸುತ್ತಿರುವ ಬಗ್ಗೆ ಸಹಾಯಕ ಅಭಿಯಂತರರು ತಿಳಿಸಿರುತ್ತಾರೆ. ರೋಡ್ ಕಟ್ಟಿಂಗ್, ಅನಧಿಕೃತ ರಸ್ತೆ ಅಗೆತ ಪ್ರಕರಣಗಳು ಕಂಡುಬಂದಿರುವುದಿಲ್ಲ. ಈ ವಿಷಯವಾಗಿ ಪ್ರಕರಣಗಳು ಕಂಡುಬಂದಲ್ಲಿ ಸೂಕ್ತ ಕ್ರಮತೆಗೆದುಕೊಳ್ಳು ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.

Scanned with CamScanner

ಮುಂದುವರೆದಂತೆ ಅನಧಿಕೃತ ಫ್ಲೆಕ್ ಬ್ಯಾನರ್‌ಗಳನ್ನು ಅಳವಡಿಸಿದ್ದಲ್ಲಿ ಪರಿವೀಕ್ಷಿಸಿ, ಸೂಕ್ತ ಕ್ರಮತೆಗೆದುಕೊಳ್ಳ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು. ಮುಂದುವರೆದಂತೆ ಸದ್ಯ ಮಳೆಗಾಲವಾದ್ದರಿಂದ ASPHALTING ವಿಷಯವಾಗಿ ಬಾಕಿ ಇರುವ ಕಾಮಗಾರಿಯನ್ನು ಶೀಘ್ರವಾಗಿ ಕೈಗೊಳ್ಳಲು ಸೂಚಿಸಲಾಯಿತು. ಪಾದಚಾರಿ ಮಾರ್ಗಗಳಿಗೆ ಸಂಬಂಧಿಸಿದಂತೆ ಅನಧಿಕೃತವಾಗಿ ಒತ್ತುವರಿ ಆಗಿದ್ದಲ್ಲಿ ಸದರಿ ಒತ್ತುವರಿ ನಿರ್ಮೂಲನೆ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಹಾಗೂ ವಾರ್ಡ್ ಮಟ್ಟದಲ್ಲಿನ ಎಲ್ಲಾ ಪಾದಚಾರಿ ಮಾರ್ಗಗಳನ್ನು ಪರಿವೀಕ್ಷಣೆ ಮಾಡಲು ಸಹಾಯಕ ಅಭಿಯಂತರರಿಗೆ ನಿರ್ದೇಶಿಸಲಾಯಿತು.

**ವಿದ್ಯುತ್ ವಿಭಾಗ**

ವಿದ್ಯುತ್ ವಿಭಾಗದ ಸಹಾಯಕ ಅಭಿಯಂತರರು ಉಪಸ್ಥಿತರಿದ್ದು, ಸದ್ಯ ಅನುಷ್ಠಾನಗೊಂಡಿರುವ ಬೀದಿ ದೀಪಗಳ ನಿರ್ವಹಣೆ ಮಾಡುತ್ತಿರುವುದಾಗಿ ತಿಳಿಸಿದ್ದರು. ಈ ಸಂಬಂಧ ಎಲ್ಲಾ ಬೀದಿ ದೀಪಗಳನ್ನು ಪರಿಕ್ಷಿಸಿ ತೊಂದರೆ ಇದ್ದಲ್ಲಿ ಸೂಕ್ತ ಕ್ರಮಕೈಗೊಳ್ಳಲು ನಿರ್ದೇಶಿಸಿದ್ದರು. ಸಭೆಯಲ್ಲಿ ಉಪಸ್ಥಿತರಿದ್ದ ಎ.ಜಿ.ಎಸ್ ಸದಸ್ಯರು ಎ.ಜಿ.ಎಸ್ ಉದ್ಯಾನವನದಲ್ಲಿ ದೀಪಗಳು ದುರಸ್ಥಿಯಲ್ಲಿರುವ ಬಗ್ಗೆ ದೂರಲಾಗಿದ್ದು, ಈ ಬಗ್ಗೆ ಸೂಕ್ತ ಕ್ರಮವಹಿಸುವುದಾಗಿ ವಿದ್ಯುತ್ ವಿಭಾಗದ ಅಭಿಯಂತರರಿಗೆ ಸೂಚಿಸಲಾಯಿತು. ಜಯನಗರ ಹೆಚ್.ಬಿ.ಸಿ.ಎಸ್ ಪ್ರದೇಶದಲ್ಲಿ ವಿದ್ಯುತ್ ದೀಪಗಳನ್ನು ಆರಿಸುವ ಬಗ್ಗೆ ಗಮನಹರಿಸಲು ಸದಸ್ಯರ ದೂರಿನ ಮೇರೆಗೆ ಕ್ರಮವಹಿಸಲು ಸೂಚಿಸಲಾಯಿತು.

**ಕೆರೆಗಳು**

ಕೆರೆ ವಿಭಾಗದ ಸಹಾಯಕ ಅಭಿಯಂತರರು ಸಭೆಯಲ್ಲಿ ಉಪಸ್ಥಿತರಿದ್ದು, ಸುಬ್ರಮಣ್ಯಪುರ ಕೆರೆಯ ಸಂಬಂಧ FENCING ಮಾಡುವ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಇರುವ ಕಾರಣ FENCING ಕಾರ್ಯವನ್ನು ಮುಂದೂಡಲಾಗಿದೆ ಎಂದು ತಿಳಿಸಿರುತ್ತಾರೆ ಹಾಗೂ ಸುಬ್ರಮಣ್ಯಪುರ ಕೆರೆ ಅಂಗಳದಲ್ಲಿ DEBRIS ಸಂಗ್ರಹಗೊಂಡಿರುವ ವಿಷಯವಾಗಿ ನೋಡೆಲ್ ಅಧಿಕಾರಿಗಳು ಕೆರೆ ವಿಭಾಗದವರಿಗೆ ನಿರ್ದೇಶನ ನೀಡಿದ್ದು, ಈಗ ಕೆರೆ ಅಂಗಲದಲ್ಲಿ ಇದ್ದ DEBRIS ಪೂರ್ಣವಾಗಿ ತೆಗೆದುಹಾಕಲಾಗಿದೆ ಎಂದು ತಿಳಿಸಿರುತ್ತಾರೆ. ಮುಂದುವರೆದಂತೆ ವಾರ್ಡ್ ಮಟ್ಟದ ಎಲ್ಲಾ ಕೆರೆಗಳನ್ನು ಶುದ್ಧೀಕರಣ ಕಾರ್ಯಕ್ರಮಗಳು ಕಾಲಕಾಲಕ್ಕೆ ನಡೆಸುವುದಾಗಿ ತಿಳಿಸಿರುತ್ತಾರೆ. ಮುಂದುವರೆದಂತೆ ಕೆರೆ ವಿಭಾಗದ ಅಧಿಕಾರಿಯಾದ ಹೋಮ್‌ಗಾರ್ಡ್ ವ್ಯವಸ್ಥೆ ಇಲ್ಲದಿರುವ ಬಗ್ಗೆ ಪ್ರಸ್ಥಾಪಿಸಿದ್ದು, ಈ ವಿಷಯವಾಗಿ ಸಕ್ರಮ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಚರ್ಚಿಸಲಾಯಿತು.

**ಅರಣ್ಯ ಇಲಾಖೆ:**

ಅರಣ್ಯ ವಿಭಾಗಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳು ಹಾಜರಿದ್ದು, ಪ್ಲ್ಯಾಂಟೇಷನ್ ಸಂಭಂಧಿಸಿದಂತೆ ಉತ್ತರಹಳ್ಳೀ ವಾರ್ಡ್ ಮಟ್ಟದಲ್ಲಿ 600 ಗಿಡಗಳನ್ನು ನೆಡುವಲ್ಲಿ ಕ್ರಮವಹಿಸಲಾಗಿರುವುದಾಗಿ ತಿಳಿಸಿದ್ದು, ಸದರಿ ಗಿಡಗಳ ನಿರ್ವಹಣೆ ಸಂಬಂಧಪಟ್ಟ ಗುತ್ತಿಗೆದಾರರು ಮಾಡುವುದಾಗಿ ತಿಳಿಸಿದ್ದರು.

ಮುಂದುವರೆದಂತೆ ಮಳೆ ಆಗುವ ಸಮಯದಲ್ಲಿ ಗಿಡಗಳ ಅವಶೇಷವನ್ನು ಸಾರ್ವಜನಿಕ ಸ್ಥಳಗಳಿಂದ ನಿರ್ಮೂಲನೆ ಮಾಡುವ ಬಗ್ಗೆ ಕ್ರಮವಹಿಸುವ ಬಗ್ಗೆ ನಿದೇರ್ಶಿಸಲಾಯಿತು ಹಾಗೂ ಮರ ಕಡಿತ ವಿಷಯವಾಗಿ ತೆಗೆದುಕೊಳ್ಳಲಾಗುತ್ತಿರುವ ಕ್ರಮಗಳ ಬಗ್ಗೆ ಮುಂದಿನ ಸಭೆಯಲ್ಲಿ ತಿಳಿಸಲು ನಿರ್ದೇಶಿಸಲಾಯಿತು.

**ಬಿಡಬ್ಲ್ಯೂಎಸ್ಎಸಬಿ ಹಾಗೂ ಬೆಸ್ಕಾಂ ಅಧಿಕಾರಿಗಳು**

ತಮ್ಮ ವ್ಯಾಪ್ತಿಯಲ್ಲಿ ಎಲ್ಲಾ ಕಾರ್ಯಗಳನ್ನು ಕ್ರಮಬದ್ಧವಾಗಿ ನಡೆಯುತ್ತಿರುವುದಾಗಿ ಪ್ರಸ್ತಾಪಿಸಿದರು. ಈ ವಿಷಯವಾಗಿ ಮುಂದಿನ ಸಭೆಯಲ್ಲಿ ಸಮಗ್ರ ವರದಿಯನ್ನು ನೀಡಲು ನೋಡೆಲ್ ಅಧಿಕಾರಿಗಳು ಅಧಿಕಾರಿಗಳಿಗೆ ಸೂಚಿಸಲಾಯಿತು. ಹಾಗೂ ತಮ್ಮ ಸಲಹೆಗಳನ್ನು ಮುಂದಿನ ಸಭೆಯಲ್ಲಿ ಹೇಳಲು ಸೂಚಿಸಿದ್ದರು.

Scanned with CamScanner

**ಪೋಲೀಸ್ ಇಲಾಖೆ:**

ವಾರ್ಡ್‌ಮಟ್ಟದಲ್ಲಿ ತೆಗೆದುಕೊಳ್ಳಲಾಗುತ್ತಿರುವ ಸಾರ್ವಜನಿಕ ಸುರಕ್ಷತಾ ವಿಷಯವಾಗಿ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವ ಬಗ್ಗೆ ಚರ್ಚಿಸಲಾಗಿದ್ದು, ಎ.ಜಿಎಸ್ ಲೇಔಟ್ ಸದಸ್ಯರು ಕಾಲಕಾಲಕ್ಕೆ ಪೋಲೀಸ್ ಪೆಟ್ರೋಲಿನ್ ನಡೆಯುತ್ತಿರುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ. ಉಪಸ್ಥಿತರಿದ್ದ ಅಧಿಕಾರಿಗಳಿಗೆ ಮುಂದಿನ ಸಭೆಯಲ್ಲಿ ಸಮಗ್ರ ವರದಿಗಳನ್ನು ಸಲಹೆಗಳನ್ನು ನೀಡಲು ನೋಡೆಲ್ ಅಧಿಕಾರಿಗಳು ಸೂಚಿಸಿರುತ್ತಾರೆ.

ಮೇಲ್ಕಂಡಂತೆ ಈ ಎಲ್ಲಾ ಇಲಾಖೆಗಳ ವಿಷಯವಾಗಿ ದೂರುಗಳು ಇದ್ದಲ್ಲಿ ತಿಳಿಸಲು ಸ್ಥಳೀಯ ಸಂಘ ಸಂಸ್ಥೆಗಳಿಗೆ ಕೇಳಲಾಗಿದ್ದು, ಪ್ರಸ್ತಾಪಿತ ದೂರುಗಳ ಬಗ್ಗೆ ಸಭಯಲ್ಲಿ ಚರ್ಚಿಸಲಾಗಿ ಹಾಗೂ ವಾರ್ಡ್ ಮಟ್ಟದಲ್ಲಿಯೇ ಎಲ್ಲಾ ವಿಭಾಗಗಳ ಕಾರ್ಯನಿರ್ವಹಣೆ ಬಗ್ಗೆ ಕೂಡ ಸಭೆಯಲ್ಲಿ ಚರ್ಚಿಸಲಾಗಿದ್ದು, ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ಸಭೆಯಲ್ಲಿ ನಿರ್ದೇಶಿಸಲಾಗಿದ್ದು, ವರದಿಗಳನ್ನು ಮುಂದಿನ ಸಭೆಯಲ್ಲಿ ನೀಡಲು ನಿರ್ದೇಶಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಮಿತಿ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸಂಘಸಂಸ್ಥೆಯ ಸದಸ್ಯರಿಗೂ ನೋಡೆಲ್ ಅಧಿಕಾರಿಗಳು ವಂದಿಸಿದರು.

ಸಹಿ/–
ಕಾರ್ಯದರ್ಶಿ
ವಾರ್ಡ್ ನಂ.184 ಉತ್ತರಹಳ್ಳಿ

ಸಹಿ/–
ಅಧ್ಯಕ್ಷರು
ನೋಡೆಲ್ ಅಧಿಕಾರಿ
ವಾರ್ಡ್ ನಂ.184 ಉತ್ತರಹಳ್ಳಿ

**ಪ್ರತಿಯನ್ನು:**

1. ಮಾನ್ಯ ವಿಶೇಷ ಆಯುಕ್ತರು(ಆಡಳಿತ) ರವರ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಅವಗಾಹನೆ ಸಲ್ಲಿಸಿದೆ.
3. ಮಾನ್ಯ ಮುಖ್ಯ ಅಭಿಯಂತರರು, ಬೊಮ್ಮನಹಳ್ಳಿ ವಲಯ ರವರಿಗೆ.
4. ಮಾನ್ಯ ಮುಖ್ಯ ಆರೋಗ್ಯಾಧಿಕಾರಿಗಳು, ಬೊಮ್ಮನಹಳ್ಳಿ ವಲಯ ರವರಿಗೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು(ವಿದ್ಯುತ್/ಕೆರೆ) ರವರಿಗೆ.
6. ವೈದ್ಯಕೀಯ ಆರೋಗ್ಯಾಧಿಕಾರಿಗಳು ಬೊಮ್ಮನಹಳ್ಳಿ ವಲಯ ರವರಿಗೆ
7. ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ವಲಯ ರವರಿಗೆ
8. ಮಾನ್ಯ ಅರಣ್ಯ ಸಂರಕ್ಷಣಾ ಅಧಿಕಾರಿಗಳು ರವರಿಗೆ.
9. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ
10. ವಾರ್ಡ್ ಸಮಿತಿ ಸದಸ್ಯರುಗಳ ಮಾಹಿತಿಗಾಗಿ.
11. ಕಚೇರಿ ಪ್ರತಿ.

Scanned with CamScanner